## 2007ರಿಂದ ಜನವರಿ 2026(31.01.2026) ರವರೆಗೆ ಅಂಗಾಂಗ ದಾನದ ಅಂಕಿ ಅಂಶಗಳ ವಿವರಗಳು ಈ ಕೆಳಗಿನಂತಿವೆ

| ಕ್ರ. ಸಂ. | ವರ್ಷ | ಅಂಗಾಂಗ ದಾನ | ಮೂತ್ರಪಿಂಡ | ಯಕೃತ್ತು | ಹೃದಯ | ಶ್ವಾಸಕೋಶಗಳು | ಸಣ್ಣ ಕರುಳು | ಕೈ | ಒಟ್ಟು ಅಂಗಾಂಗಗಳು | ಹೃದಯ ಮತ್ತು ಶ್ವಾಸಕೋಶ | ಮೂತ್ರಪಿಂಡ ಮತ್ತು ಮೇದೋಜೀರಕ ಗ್ರಂಥಿ | ಯಕೃತ್ ಮತ್ತು ಮೂತ್ರಪಿಂಡ | ಒಟ್ಟು ಮಲ್ಟಿ ಆರ್ಗನ್ಸ್ | ಸ್ಕಿನ್ | ಹೃದಯ ಕವಾಟಗಳು | ಕಾರ್ನಿಯಾ | ಒಟ್ಟು ಅಂಗಾಂಶಗಳು | ಒಟ್ಟು ಅಂಗಗಳು ಮತ್ತು ಅಂಗಾಂಶಗಳು |
|---|---|---|---|---|---|---|---|---|---|---|---|---|---|---|---|---|---|---|
| | 2007ರಿಂದ 2016ರವರೆಗೆ | 234 | 365 | 203 | 40 | 0 | 0 | 0 | 608 | 0 | 3 | 9 | 12 | 0 | 102 | 404 | 506 | 1,126 |
| 1 | 2017 | 68 | 90 | 61 | 24 | 4 | 3 | 0 | 182 | 0 | 4 | 7 | 11 | 4 | 28 | 118 | 150 | 343 |
| 2 | 2018 | 89 | 132 | 79 | 31 | 14 | 0 | 1 | 257 | 0 | 3 | 3 | 6 | 4 | 37 | 142 | 183 | 446 |
| 3 | 2019 | 105 | 160 | 80 | 27 | 29 | 0 | 1 | 297 | 1 | 3 | 6 | 10 | 3 | 44 | 150 | 197 | 504 |
| 4 | 2020 | 35 | 53 | 27 | 8 | 6 | 1 | 0 | 95 | 1 | 0 | 3 | 4 | 4 | 12 | 52 | 68 | 167 |
| 5 | 2021 | 70 | 92 | 61 | 22 | 10 | 2 | 0 | 187 | 1 | 3 | 3 | 7 | 6 | 18 | 66 | 90 | 284 |
| 6 | 2022 | 151 | 233 | 124 | 46 | 12 | 0 | 0 | 415 | 2 | 4 | 4 | 10 | 38 | 64 | 246 | 348 | 773 |
| 7 | 2023 | 178 | 268 | 143 | 35 | 20 | 3 | 0 | 469 | 5 | 2 | 9 | 16 | 22 | 85 | 286 | 393 | 878 |
| 8 | 2024 | 162 | 259 | 134 | 41 | 22 | 1 | 0 | 457 | 1 | 4 | 8 | 13 | 24 | 63 | 252 | 339 | 809 |
| 9 | 2025 | 198 | 306 | 167 | 50 | 29 | 1 | 0 | 553 | 2 | 3 | 6 | 11 | 33 | 76 | 288 | 397 | 961 |
| 10 | 2026 | 12 | 10 | 10 | 5 | 4 | 0 | 0 | 29 | 0 | 0 | 0 | 0 | 2 | 4 | 10 | 16 | 45 |
| | ಒಟ್ಟು | 1,302 | 1,968 | 1,089 | 329 | 150 | 11 | 2 | 3,549 | 13 | 29 | 58 | 100 | 140 | 533 | 2,014 | 2,687 | 6,336 |



2ರವರೆಗೆ ಒಟ್ಟು 56,892 ಮಂದಿ ಸಾರ್ವಜನಿಕರು ಅಂಗದಾನಕ್ಕೆ ಪ್ರತಿಜ್ಞೆ ಮಾಡಿಕೊಂಡಿದ್ದು, ಕರ್ನಾಟಕವು ರಾಷ್ಟ್ರಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆ 11,912 ಪ್ರತಿಜ್ಞೆಗಳೊಂದಿಗೆ ಮೊದಲ ಸ್ಥಾನದಲ್ಲಿದೆ.

### ತರಬೇತಿ, ಕಾರ್ಯಾಗಾರಗಳಿಗೆ ಒತ್ತು!

ರಾಜ್ಯಾದ್ಯಂತ ಅಂಗಾಂಗ ದಾನಗಳ ಸಂಖ್ಯೆಯನ್ನು ಏರಿಕೆ ಮಾಡಲು ಅಗತ್ಯ ಕ್ರಮಗಳನ್ನು ಸರ್ಕಾರದಿಂದ ಕೈಗೊಳ್ಳಲಾಗುತ್ತಿದೆ. ವಿಶೇಷವಾಗಿ ಜಿಲ್ಲಾವಾರು ಮಿದುಳು ನಿಷ್ಕ್ರಿಯಗೊಂಡವರನ್ನು ಗುರುತಿಸುವುದರಿಂದ ಅಂಗಾಂಗಗಳ ನಿರೀಕ್ಷೆಯಲ್ಲಿರುವ ವ್ಯಕ್ತಿಗಳನ್ನು ತಲುಪುವವರೆಗೆ ಪ್ರತಿಯೊಂದು ಹಂತದ ಪ್ರಕ್ರಿಯೆಗೆ ವೈದ್ಯಕೀಯ ಸಿಬ್ಬಂದಿಗೆ ಅಗತ್ಯ ತರಬೇತಿ ಅನಿವಾರ್ಯ. ಹೀಗಾಗಿಯೇ, ರಾಜ್ಯ ಸರ್ಕಾರ ರಾಜ್ಯಾದ್ಯಂತ ವಿವಿಧ ತರಬೇತಿ, ಕಾರ್ಯಾಗಾರಗಳನ್ನು ಕೈಗೊಳ್ಳುವ ಮೂಲಕ ವೈದ್ಯಕೀಯ ತಂಡವನ್ನು ಸಜ್ಜುಗೊಳಿಸಲು ಯತ್ನಿಸಿದೆ.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎನ್‌ಟಿಒಆರ್‌ಸಿ ಅಡಿ 'ಬ್ರೈನ್ ಡೆತ್ ಐಡೆಂಟಿಫಿಕೇಶನ್, ಬ್ರೈನ್ ಡೆತ್ ಡಿಕ್ಲರೇಶನ್ ಮತ್ತು ಡೋನರ್ ಮ್ಯಾನೇಜ್‌ಮೆಂಟ್' ವಿಷಯಗಳ ಕುರಿತು ಮೈಸೂರು ವಲಯದ ಎಲ್ಲಾ ಅಂಗಕಸಿ ಕೇಂದ್ರಗಳ ಐಸಿಯು ತಂಡ, ಟ್ರಾನ್ಸ್‌ಪ್ಲಾಂಟ್ ಕೋಆರ್ಡಿನೇಟರ್‌ಗಳು ಹಾಗೂ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಜೊತೆಗೆ, ಜಿಲ್ಲಾವಾರು ಜಿಲ್ಲಾಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಆರೋಗ್ಯಾಧಿಕಾರಿಗಳಿಗೆ ಈ ವಿಷಯಗಳಲ್ಲಿ ಅಗತ್ಯ ತರಬೇತಿಯನ್ನು ಒದಗಿಸಲಾಗಿದೆ. ಈಗಾಗಲೇ ಹುಬ್ಬಳ್ಳಿ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಈ ತರಬೇತಿ ಕಾರ್ಯಗಳು ನಿರೀಕ್ಷೆ ಮೀರಿ ಮುಕ್ತಾಯ ಕಂಡಿದ್ದು, ಜೀವಸಾರ್ಥಕತೆಗೆ ಅಗತ್ಯ ತರಬೇತಿ, ಕಾರ್ಯಾಗಾರಗಳನ್ನ ಆಯೋಜನೆ ಮಾಡಲಾಗಿದೆ. ಜೀವಸಾರ್ಥಕತೆ

